**ದಿಃ 27.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ– ಎದುರುದಾರರ ಪರ ಶ್ರೀ.ಬಿ.ಎನ್.ಜಿ. ವಕೀಲರಿಂದಃ–**

5. ನಂ.9, ಪರಮಹಂಸ ರಸ್ತೆ, ಯಾದವಗಿರಿ, ಮೈಸೂರು, ಈ ಮನೆಯಲ್ಲಿ ನಾನು ಕೂಡ ಪ್ರತಿವಾದಿಯೊಂದಿಗೆ ವಾಸ ಮಾಡುತ್ತಿದ್ದೆ ಎನ್ನುವುದು ಸರಿ. ನನ್ನ ವಿದ್ಯಾಭ್ಯಾಸವನ್ನು ಸಹ ನಾನು ಅದೇ ಮನೆಯಲ್ಲಿ ಮುಗಿಸಿರುತ್ತೇನೆ ಎನ್ನುವುದು ಸರಿ. ಇದೇ ಮನೆಯಲ್ಲಿ ನನ್ನ ಇನ್ನೊಬ್ಬ ಚಿಕ್ಕಪ್ಪ ಹುಚ್ಚಪ್ಪರವರ ಪತ್ನಿ ರತ್ನಮ್ಮ ಹಾಗೂ ಅವರ ಮಗ ನವೀನ್ ಚಂದ್ ಸಹ ವಾಸ ಮಾಡುತ್ತಿದ್ದರು ಎನ್ನುವುದು ಸರಿ. ಸಿ.ಬಿ.ಲೀಲಾವತಿ ಗಂಡ ಮೃತ ಪಟ್ಟ ನಂತರ ಪ್ರತಿವಾದಿಯೇ ಆಕೆಯ ಮುಂದಿನ ಡಾಕ್ಟರೇಟ್ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಟ್ಟಿದ್ದರು. ಅವರು ಕನ್ನಡದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು ಎನ್ನುವುದು ಸರಿ. ಅವರೊಂದಿಗೆ ಸಾಹಿತಿ ಕುವೆಂಪು ರವರ ಮಗಳು ಸಹ ಕಾಲೇಜಿಗೆ ಹೋಗುತ್ತಿದ್ದರು ಎನ್ನುವುದು ಸರಿ. ಪ್ರತಿವಾದಿ ಮೊದಲು ಸರ್ಕಾರಿ ವೈದ್ಯರಾಗಿದ್ದರು ಎನ್ನುವುದು ಸರಿ. ನಂತರ ರಾಜೀನಾಮೆಯನ್ನು ನೀಡಿ, ಬಸಪ್ಪ ಮೆಮೊರಿಯಲ್ ಆಸ್ಪತ್ರೆಯನ್ನು ಸ್ಥಾಪಿಸಿದರು ಎನ್ನುವುದು ಸರಿ. ನಂತರ ಹಂತ ಹಂತವಾಗಿ ಸದರಿ ಆಸ್ಪತ್ರೆ 400 ಹಾಸಿಗೆ ಸವಲತ್ತುಗಳುಳ್ಳ ಆಸ್ಪತ್ರೆಯಾಗಿ ಬೆಳೆಯಿತು ಎನ್ನುವುದು ಸರಿ. ನಂತರ ಸಿ.ಬಿ.ಲೀಲಾವತಿಯವರಿಗೆ ಪ್ರತಿವಾದಿಯವರು ಎಸ್.ಬಿ.ಆರ್.ಆರ್. ಮಹಾಜನ್ ಪಿಯು ಕಾಲೇಜು, ಮೈಸೂರಿನಲ್ಲಿ ಕನ್ನಡ ಉಪನ್ಯಾಸಕ ಹುದ್ದೆಯನ್ನು ಕೊಡಿಸಿದರು ಎನ್ನುವುದು ಸರಿ. ಆಕೆ ಬಹಳ ಸರಳವಾದ ಜೀವನವನ್ನು ನಡೆಸುತ್ತಿದ್ದರು ಎನ್ನುವುದು ಸರಿ. ಆಕೆಯ ಗಂಡ ಮೃತ ಪಟ್ಟ ನಂತರ ಆಕೆ ಮತ್ತು ಆಕೆಯ ಮಗ ಪ್ರವೀಣ್ ಎದುರುದಾರರು ಹಾಗೂ ಅವರ ಕುಟುಂಬದವರ ಮೇಲೆ ಪೂರ್ತಿಯಾಗಿ ಅವಲಂಬಿಸಿದ್ದರು ಎನ್ನುವುದು ಸರಿ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಆಕೆಗೆ ಪಿಂಚಣಿ ಬರುತ್ತಿತ್ತು ಮತ್ತು ಮಹಾಜನ್ ಕಾಲೇಜಿನಲ್ಲಿ ಆಕೆಯ ಹುದ್ದೆ ಕೇವಲ ತಾತ್ಕಾಲಿಕವಾಗಿತ್ತು ಎಂದು. ಆಕೆಯ ಮಗ ವೈದ್ಯಕೀಯ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು ಎನ್ನುವುದು ಸರಿ. ಆತನ ವಿದ್ಯಾಭ್ಯಾಸದ ಖರ್ಚು ವೆಚ್ಚವನ್ನೆಲ್ಲಾ ಎದುರುದಾರರು ನೋಡಿಕೊಳ್ಳುತ್ತಿದ್ದರು ಎಂದು ಮಾಡಿದ ಸಲಹೆಗೆ ಸಾಕ್ಷಿ, ಆತ ಮೆರಿಟ್ ಸ್ಟೂಡೆಂಟ್ ಆಗಿದ್ದ ಎನ್ನುತ್ತಾರೆ. ಕಾಲೇಜಿನ ಫೀಯನ್ನು ಎದುರುದಾರರು ಬರಿಸುತ್ತಿದ್ದರು ಎನ್ನುವುದು ಸರಿಯಲ್ಲ.

6. ಎದುರುದಾರರು ಮತ್ತು ಅವರ ಹೆಂಡತಿ ನಳಿನಾ ಮೂರ್ತಿ ಪಡುಕೋಟೆ ಕಾವಲ್, ಕಸಬಾ ಹೋಬಳಿ, ಹೆಚ್.ಡಿ.ಕೋಟೆ ತಾಲೂಕಿನಲ್ಲಿ 35 ಎಕರೆ ಜಮೀನನ್ನು ಅವರ ಹೆಸರಿನಲ್ಲಿ ಖರೀದಿಸಿದ್ದರು ಎನ್ನುವುದು ಸರಿ. ಈ ಜಮೀನನ್ನು ನಾನು ಅವರ ಮನೆಯಲ್ಲಿದ್ದಾಗ ಖರೀದಿಸಿದ್ದರು ಎನ್ನುವುದು ಸರಿ. ದಾವಾ ಸ್ವತ್ತುಗಳಾದ F,G,H ಅಂದರೆ ಸರ್ವೇ ನಂ.23, 24, 27 ರಲ್ಲಿನ ಸ್ವತ್ತುಗಳನ್ನು ಎದುರುದಾರರು ಸಿ.ಬಿ.ಲೀಲಾವತಿ ಹೆಸರಿನಲ್ಲಿ ಖರೀದಿಸಿದ್ದರು ಎನ್ನುವುದು ಸರಿಯಲ್ಲ. ದಿಃ04.10.1968 ಮತ್ತು 19.01.1979 ರ ಕ್ರಯಪತ್ರದ ಅಡಿಯಲ್ಲಿ

ಈ ಮೇಲ್ಕಂಡ ಸ್ವತ್ತುಗಳನ್ನು ಖರೀದಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಈ ಕ್ರಯಪತ್ರಗಳು ನನ್ನ ಬಳಿ ಇಲ್ಲ. ಆದರೆ ಎದುರುದಾರರ ಬಳಿಯಲ್ಲಿ ಇವೆ. 1978 ರಲ್ಲಿ ಸಿ.ಬಿ.ಲೀಲಾವತಿಯವರ ಗಂಡ ಮೃತ ಪಟ್ಟರು ಎನ್ನುವುದು ಸರಿ. ಈ ಮೇಲ್ಕಂಡ ಆಸ್ತಿಗಳನ್ನು ಖರೀದಿಸುವಷ್ಟು ಆರ್ಥಿಕ ಶಕ್ತಿ ಆಕೆಗೆ ಇರಲಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಮೇಲ್ಕಂಡ ಸ್ವತ್ತುಗಳು ನನ್ನ ದೊಡ್ಡಪ್ಪನ ಮಗ ನರಸಿಂಹರವರ ಹೆಸರಿನಲ್ಲಿದ್ದವು, ಅವರಿಂದ ಸಿ.ಬಿ.ಲೀಲಾವತಿಯವರು ಖರೀದಿಸಿದರು ಎನ್ನುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಎದುರುದಾರರು ಖರೀದಿಸಿದ್ದ 35 ಎಕರೆ ಆಸ್ತಿಗೆ ಲಗತ್ತಾಗಿ ಈ ಸರ್ವೇ ನಂ.23, 24, 27 ರಲ್ಲಿನ ಆಸ್ತಿಗಳು ಇದುದ್ದರಿಂದ, ಎದುರುದಾರರು, ಸಿ.ಬಿ.ಲೀಲಾವತಿ ಹೆಸರಿನಲ್ಲಿ ಈ ಆಸ್ತಿಗಳನ್ನು ಖರೀದಿಸಿದ್ದರು ಎಂದು ಮಾಡಿದ ಸಲಹೆಗೆ ಸಾಕ್ಷಿ, ಸರ್ವೆ ನಂ.23, 24, 27 ರಲ್ಲಿನ ಆಸ್ತಿಗಳನ್ನು ಮೊದಲೇ ಖರೀದಿಸಿದ್ದರು, ನಂತರ 35 ಎಕರೆ ಸ್ವತ್ತನ್ನು ಖರೀದಿಸಿದರು ಎನ್ನುತ್ತಾರೆ. ಈ 35 ಎಕರೆ ಸ್ವತ್ತನ್ನು ಮೊದಲೇ ಕರಾರು ಪತ್ರದ ಮೂಲಕ ಸ್ವಾಧೀನ ಪಡೆದಿದ್ದರು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಈ 35 ಎಕರೆ ಸ್ವತ್ತಿನಲ್ಲಿ ಕೆಲವು ಸ್ವತ್ತುಗಳ ಬಾಬ್ತು ಕ್ರಯಪತ್ರವನ್ನು ಮಾಡಿಕೊಂಡಿದ್ದರು ಎನ್ನುವ ವಿಷಯ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಮತ್ತು ಈ 35 ಎಕರೆ ಸ್ವತ್ತನ್ನು ಎದುರುದಾರರು ಮತ್ತು ಅವರ ಪತ್ನಿಯವರೇ ಸ್ವಾಧೀನ ಹೊಂದಿ ಅನುಭವಿಸಿಕೊಂಡು ವ್ಯವಸಾಯ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ.

7. 1986 ರಿಂದ ಸಿ.ಬಿ.ಲೀಲಾವತಿಯವರಿಗೆ ಸಕ್ಕರೆ ಕಾಯಿಲೆ ಪ್ರಾರಂಭವಾಯಿತು ಎನ್ನುವುದು ಸರಿ. 1990 ರಲ್ಲಿ ಈ ಕಾಯಿಲೆ ಅವರಿಗೆ ಉಲ್ಬಣವಾಯಿತು ಎಂದು ಮಾಡಿದ ಸಲಹೆಗೆ ಸಾಕ್ಷಿ, ಅವರ ಮಗ ಕೆ.ಪ್ರವೀಣ್ 1998 ರಲ್ಲಿ ಮೃತ ಪಟ್ಟ ನಂತರ ಅವರ ಈ ಕಾಯಿಲೆ ಉಲ್ಬಣವಾಯಿತು ಎನ್ನುತ್ತಾರೆ. ಇದರಿಂದಾಗಿ ಅವರು ಕೆಲವೊಮ್ಮೆ Hypoglycaemic state ಗೆ ಹೋಗುತ್ತಿದ್ದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಅವರು ಚೆನ್ನಾಗಿದ್ದರು, ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದರು ಎಂದು. ಅಂತಹ ಪರಿಸ್ಥಿತಿಯಲ್ಲಿ ಅವರಿಗೆ ಅವರ ಸುತ್ತಮುತ್ತಲಿನ ವಾತಾವರಣ ಅರಿವು ಇರುತ್ತಿರಲಿಲ್ಲ ಎನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು